ಪಾಠ 2 ಜನವರಿ 6–12

# ನಾನು ನೋಡಿದೆ, ನನಗೆ ಬೇಕು, ನಾನು ತೆಗೆದುಕೊಳ್ಳುವೆ

ಸಬ್ಬತ್ತಿನ ಮಧ್ಯಾಹ್ನ: ಈ ವಾರದ ಪಾಠದ ಅಧ್ಯಯನಕ್ಕಾಗಿ 2 ಕೋರಿಂಥ 8:1–7, ಮತ್ತಾಯ 13:3–7, 22; ಆದಿಕಾಂಡ 3:1–6; ಯೆಶಾಯ 56:11; ಮತ್ತಾಯ 26; 14–16; 2 ಪೇತ್ರ 1; 5–9

**ಸ್ಮರಣವಾಕ್ಯ:''ಒಬ್ಬನು ವಾಕ್ಯವನ್ನು ಕೇಳಿದಾಗ್ಯುಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವು ಆ ವಾಕ್ಯವನ್ನು ಅಡಗಿಸಿ ಬಿಡುವುದರಿಂದ ಫಲವನ್ನು ಕೊಡದೆ ಇರುತ್ತಾನೆ. ಇವನೇ ಮುಳ್ಳುಗಿಡಗಳಲ್ಲಿ ಬಿಜ ಬಿದ್ದ ನೆಲವಾಗಿರುವನು'' (ಮತ್ತಾಯ 13:22)**

ಹಣದ ಮತ್ತು ಆಸ್ತಿಯ ಆಸೆಯು ನಮ್ಮ ಬಳಿಗೆ ವಿವಿಧ ಆಯಾಮಗಳಿಂದ ಬರುತ್ತದೆ. **ಎಲೆನ್–ಜಿ–ವೈಟ್** ಮ್ಮ ನವರು ಇದನ್ನು ಭೌತಿಕವಾದ ಬಲೆಯಿಂದ ಸೈತಾನ ಮಾಡುವ ಕುತಂತ್ರ ಎಂದು ಹೇಳುತ್ತಾರೆ. ಅವನು ಜನರಿಗೆ 'ಹೋಗಿರಿ' ಭೂಮಿಯನ್ನು ಮತ್ತು ಹಣವನ್ನು ಆಕ್ರಮಿಸಿಕೊಂಡು ಈ ಲೋಕದ ಆಸೆಯ ಪಾನದಿಂದ ಮತ್ತರಾಗಿರಿ. ಪ್ರಪಂಚವನ್ನು ಅವರ ಮುಂದೆ ಬಹಳ ಆಕರ್ಷಕವಾಗಿ ತೋರಿಸಿರಿ , ಇದರಿಂದ ಅವರು ತಮ್ಮ ಅಸ್ತಿಯನ್ನು ಈ ಲೋಕದಲ್ಲಿ ಮಾಡಿಕೊಳ್ಳುವರು, ಮತ್ತು ತಮ್ಮ ದೃಷ್ಟಿಯನ್ನು ಈ ಲೋಕದ ಮೇಲೆ ಇಡುವರು. ದೇವರ ಕೆಲಸಕ್ಕೆ ಹಣ ಸಿಗದೇ ಇರುವಂತೆ ಮಾಡುವುದರ ಮೂಲಕ ಅವರು ಹಣವನ್ನು ನಮ್ಮ ವಿರುದ್ಧ ಉಪಯೋಗಿಸದಂತೆ ತಡೆಯಬೇಕು. ಹಣವನ್ನು ನಮ್ಮ ಬಳಿಯಲ್ಲಿ ಇಟ್ಟುಕೊಳ್ಳಬೇಕು. ಅವರಿಗೆ ಹೆಚ್ಚು ಹಣ ಸಿಕ್ಕಷ್ಟು ಅವರು ನಮ್ಮ ಕೆಳಗಿರುವವರನ್ನು ಅವರ ವಶಕ್ಕೆ ತೆಗೆದುಕೊಳ್ಳುವರು. ನಾವು ದ್ವೇಷಿಸುವ ದೇವರ ರಾಜ್ಯದ ಸತ್ಯವನ್ನು ಅವರು ಹೆಚ್ಚು ಪ್ರಚಾರ ಮಾಡದಂತೆ ಅವರಿಗೆ ಹಣ ಅಸೆಯನ್ನು ತೋರಿಸಿರಿ, ಮತ್ತು ನಾವು ಅವರ ಪ್ರಭಾವಕ್ಕೆ ಹೆದರಬಾರದು; ಯಾಕೆಂದರೆ ಪ್ರತಿಯೊಬ್ಬ ಸ್ವಾರ್ಥಿ, ಆಸೆಬುರುಕ ವ್ಯಕ್ತಿಯು ನಮ್ಮ ಶಕ್ತಿಯ ಕೆಳಗೆ ಬೀಳುವನು, ಮತ್ತು ಕೊನೆಗೆ ಅವನು ದೇವರ ಜನರಿಂದ ದೂರವಾಗುವನು. ಎಂದು ಜನರಿಗೆ ಹೇಳುತ್ತಾನೆ **ಪಾರುಪತ್ಯಗಾರಿಕೆಯ ಸಲಹೆಗಳು ಪುಟ 154, 155**.

ದುರದೃಷ್ಟಕರವಾಗಿ, ಈ ತಂತ್ರವು ಕೆಲಸ ಮಾಡುತ್ತಿದೆ. ಹಾಗಾದರೆ ನಾವು ಈ ಅಪಾಯಗಳ ಕುರಿತಾಗಿ ಕಲಿಯೋಣ, ಮತ್ತು ದೇವರ ವಾಕ್ಯವು ಇದರ ಕುರಿತಾಗಿ ಏನು ಹೇಳುತ್ತದೆ ಮತ್ತು ಈ ಅಧ್ಯಾತ್ಮಿಕ ಬಲೆಯಿಂದ ನಾವು ಹೇಗೆ ತಪ್ಪಿಸಿಕೊಳ್ಳುವುದು ಎಂದು ಕಲಿಯೋಣ.

* ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಜನವರಿ 13.

**ಜನವರಿ 6–12**

**ಭಾನುವಾರ** **ಜನವರಿ 7**

## ಸಮೃದ್ದಿಯ ಸುವಾರ್ತೆ

ದೂರದರ್ಶನದ ಪ್ರಸಂಗಿಕರು ಬಹಳ ಸರಳವಾದ ಸಂದೇಶವನ್ನು ಹೇಳುತ್ತಾರೆ; ದೇವರು ನಮ್ಮನ್ನು ಆಶೀರ್ವದಿಸಲು ಬಯಸುತ್ತಾನೆ ಮತ್ತು ಅದಕ್ಕೆ ಗುರುತಾಗಿ ನಮಗೆ ಅಪಾರವಾದ ಅಸ್ತಿ ಅಂತಸ್ತುಗಳನ್ನು ನಿಮಗೆ ನೀಡುತ್ತಾನೆ. ಇದರ ಇನ್ನೊಂದು ಅರ್ಥ ನೀವು ನಂಬಿಗಸ್ತರಾಗಿದ್ದರೆ ದೇವರು ನಿಮ್ಮನ್ನು ಐಶ್ವರ್ಯವಂತರಾಗುವಂತೆ ಮಾಡುತ್ತಾನೆ.

ಈ ಉಪಾಯವು ಅಥವಾ ಅದರ ರೂಪಾಂತರಗಳನ್ನು ಸಮೃದ್ದಿಯ ಸುವಾರ್ತೆ ಎಂಬುದಾಗಿ ಕರೆಯುತ್ತೇವೆ. ದೇವರನ್ನು ಹಿಂಬಾಲಿಸಿರಿ, ಆತನು ನಮ್ಮನ್ನು ಲೋಕದ ಐಶ್ವರ್ಯಗಳಿಂದ ಸ್ಥಿತಿವಂತರನ್ನಾಗಿ ಮಾಡುತ್ತಾನೆ. ಈ ವಿಧಾನವು ಭೌತಿ ಕವಾದವನ್ನು ಪ್ರತಿಪಾದಿಸುವ ಸುಳ್ಳು ಭೋಧನೆಯಾಗಿದೆ, ಯಾಕೆಂದರೆ ಇದು ವಾಸ್ತವವಾಗಿ ಏನು ಹೇಳುತ್ತದೆ ಎಂದರೆ ನೀವು ಭೌತಿಕವಾಗಿ ಅಭಿವೃದ್ದಿಯನ್ನು ಪಡೆಯಬೇಕೋ ಮತ್ತು ಅದರಿಂದ ಆನಂದವನ್ನು ಹೊಂದಬೇಕೋ? ಹಾಗಾದರೆ ನಮ್ಮ ಬಳಿ ನಿಮಗೆ 'ಸುವಾರ್ತೆ' ಇದೆ.

ಅದರೂ ಕೂಡ ಸುವಾರ್ತೆಯನ್ನು ಆಸ್ತಿಯ ಜೊತೆಗೆ ಜೋಡಿಸುವುದು ತಪ್ಪಾದ ಪ್ರದರ್ಶನವಾಗಿದೆ. ಈ ನಂಬಿಕೆಯು ವಾಕ್ಯವನ್ನು ತಿಳಿಸುವುದಲ್ಲದೆ ಸತ್ಯವೇದದ ಭಾಷೆಯನ್ನೂ ಅರ್ಥ ಸತ್ಯದಲ್ಲಿ ಸುತ್ತಿ ಜನರ ಮುಂದೆ ಇಡುವುದಾಗಿದೆ.ಈ ಸುಳ್ಳಿನ ಮೂಲ ಉದ್ದೇಶವು ಪಾಪದ ಮೂಲಕ್ಕೆ ಸಂಬಂಧಿಸಿದೆ, ಮತ್ತು ಸ್ವಾರ್ಥ ಹಾಗೂ ಸ್ವಾರ್ಥವನ್ನು ಪ್ರೀತಿಸುವುದು ಎಲ್ಲದಕ್ಕಿಂತ ಹೆಚ್ಚಾಗಿದೆ.

ಸಮೃದ್ದಿಯ ಸುವಾರ್ತೆಯ ಬೋಧನೆಯು ನಾವು ದೇವರಿಗೆ ಕೊಡುವುದರಿಂದ ಆತನು ತಿರುಗಿ ನಮಗೆ ಹೆಚ್ಚಾದ ಐಶ್ವರ್ಯವನ್ನು ನೀಡುತ್ತಾನೆ ಎಂದು ತಿಳಿಸುತ್ತದೆ. ಆದರೆ ಇದು ದೇವರನ್ನು ಹಣದ ಯಂತ್ರವನ್ನಾಗಿ ಮಾಡುತ್ತದೆ ಹಾಗೂ ನಮ್ಮ ಮತ್ತು ಆತನ ಜೊತೆಗಿನ ಸಂಬಂಧವನ್ನು ಕೇವಲ ವ್ಯಾಪಾರದ ಒಪ್ಪಂದದಂತೆ ಮಾಡುತ್ತದೆ. ನೀನು ವಾಗ್ದಾನ ಮಾಡಿದ ರೀತಿಯಲ್ಲಿ ನೀನು ಅದನ್ನು ನನಗೆ ನೀಡುವುದರಿಂದ ನಾನು ನಿನಗೆ ಇದನ್ನು ನೀಡುತ್ತೇನೆ. ಇದನ್ನು ನೀಡುವುದು ನ್ಯಾಯವಾದದ್ದು ಎಂದು ನಾನು ನೀಡುವುದಿಲ್ಲ ಬದಲಿಗೆ ನನಗೆ ಏನು ಸಿಗುತ್ತದೆ ಎಂದು ನಾನು ಇದನ್ನು ಮಾಡುತ್ತೇನೆ.



### ಇದೆ ಸಮೃದ್ದಿಯ ಸುವಾರ್ತೆ.

2 ಕೊರಿಂಥ 8:1–7 ಓದಿರಿ ಇಲ್ಲಿ ಏನು ನಡೆಯುತ್ತಿದೆ ಸಮೃದ್ದಿಯ ಸುವಾರ್ತೆಗೆ ವಿರುದ್ದವಾಗಿ ಯಾವ ನಯಮಗಳು ಇಲ್ಲಿ ಕಾಣುತ್ತವೆ. 'ಕೃಪೆಯಿಂದ ಕೊಡುವುದು' ಎಂದು ಪೌಲನು ಹೇಳುವಾಗ ಅದರ ಅರ್ಥವೇನು?

ಈ ಜನರು 'ಅತೀ ಬಡತನದ' ನಡುವೆಯೂ ಕೂಡ (2 ಕೊರಿಂಥ 8:2) ಅವರು ಉದಾರಿಗಳಾಗಿದ್ದರು, ಅವರು ಕೊಡಲು ಇದ್ದ ಸಾಮರ್ಥ್ಯಕ್ಕಿಂತ ಹೆಚ್ಚಾಗಿ ಕೊಟ್ಟರು. ಇಂತಹ ಅನೇಕ ವಾಕ್ಯಗಳು ನೀವು ದೇವರೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿದ್ದರೆ ಅದನ್ನು ತೊರಿಸಲು ನಿಮ್ಮ ಬಳಿ ಅಪಾರವಾದ ಐಶ್ವರ್ಯ ಇರುತ್ತದೆ ಎಂಬ ಸಮೃದ್ದಿಯ ಸುವಾರ್ತೆಯ ಸುಳ್ಳು ಬೋಧನೆಯಿಂದ ನಮ್ಮನ್ನು ತಪ್ಪಿಸುತ್ತವೆ.

ದೇವರೊಂದಿಗೆ ನೀವು ನಂಬಿಗಸ್ತರಾಗಿದ್ದು ಹೆಚ್ಚು ಆಸ್ತಿಯನ್ನು ಹೊಂದದೆ ಅಥವಾ ದೇವರೊಂದಿಗೆ ನೀವು ನಂಬಿಗಸ್ತರಾಗಿರದಿದ್ದರು ಕೂಡ ನಿಮ್ಮ ಬಳಿ ಅಪಾರವಾದ ಆಸ್ತಿಯು ಇರುತ್ತದೆ ಇಂತಹ ಉದಾಹರಣೆಗಳನ್ನು ನೀವು ಎಲ್ಲಿ ಕಾಣಬಹುದು? ಐಶ್ವರ್ಯವು ದೇವರ ಆಶೀರ್ವಾದ ಗುರುತು ಎಂದು ಹೇಳುವುದರ ಕುರಿತಾಗಿ ಇದು ಏನು ಹೇಳುತ್ತದೆ?

**ಸೋಮವಾರ** **ಜನವರಿ 8**

## ಅಸ್ಪಷ್ಟವಾದ ಅಧ್ಯಾತ್ಮಿಕ ದೃಷ್ಟಿ

ಈ ಜೀವನದ ಮತ್ತು ಲೋಕದ ಆಸೆಗಳು ತಾತ್ಕಾಲಿಕ, ಇಲ್ಲಿರುವ ಯಾವುದು ಶಾಶ್ವತವಲ್ಲ.ಈ ಸತ್ಯವನ್ನು ತಿಳಿಯಲು ನಮಗೆ ಸತ್ಯವೇದದ ಸಹಾಯ ಬೇಕಾಗಿಲ್ಲ. ಪೌಲನು ಹೇಳುವ ಹಾಗೆ "ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪ ಕಾಲ ಮಾತ್ರ ಇರುವದು; ಕಾಣದಿರುವಂಥದು ಸದಾಕಾಲವೂ ಇರುವದು." (2 ಕೊರಿಂಥ 4:18) ಕ್ರೈಸ್ತರು ಈ ಲೋಕದ ಮೇಲಿನ ಆಸೆಗಳ ಮೇಲೆ ತಮ್ಮ ದೃಷ್ಟಿಯನ್ನು ಇಟ್ಟಾಗ ಪರಲೋಕದ ಹಾದಿಯು ಅವರಿಗೆ ಬಹಳ ಅಸ್ಪಷ್ಟವಾಗಿ ಕಾಣುತ್ತದೆ. ಲೋಕದ ಮೇಲಿನ ಆಸೆಗಳು ಅವರ ಕಣ್ಣುಗಳನ್ನು ಕುರುಡಾಗಿಸುತ್ತವೆ. ಹೆಲೆನ್ ಕೆಲ್ಲರ್ ರವರು ಕುರುಡರಾಗಿದ್ದರು, ಅವರು ಹೀಗೆ ಹೇಳುತ್ತಾರೆ. "ಯಾರು ದೃಷ್ಟಿಯನ್ನು ಹೊಂದಿದ್ದರೂ ಕೂಡ ದೂರದೃಷ್ಟಿ ಇಲ್ಲದೆ ಇರುವರೋ ಅವರು ಲೋಕದಲ್ಲಿ ಬಹಳ ದೌರ್ಭಾಗ್ಯರು" ಕೆಲವರು ದೃಷ್ಟಿಯನ್ನು ಹೊಂದಿದ್ದರೂ ಕೂಡ ಅಧ್ಯಾತ್ಮಿಕವಾಗಿ ಕುರುಡಾಗಿದ್ದ ಅನೇಕರ ಉದಾಹರಣೆಗಳನ್ನು ನಾವು ಸತ್ಯವೇದದಲ್ಲಿ ಕಾಣಬಹುದು.

ಕೆಲವರು ಲೋಕವನ್ನು ಎಷ್ಟು ಪ್ರೀತಿಸುತ್ತಾರೆ ಎಂದರೆ ಆ ಪ್ರೀತಿಯ ಬದಲಿಗೆ ಸತ್ಯವನ್ನು ಕೂಡ ಮಾರಲು ಹಿಂಜರಿಯುವುದಿಲ್ಲ. ಅವರ ಆಸ್ತಿಯು ಹೆಚ್ಚಿದ ಹಾಗೆ ಪರಲೋಕದ ಮೇಲಿನ ಅವರ ಅಸೆ ಕಡಿಮೆಯಾಗುತ್ತದೆ. ಅವರು ಎಷ್ಟು ಲೋಕವನ್ನು ಪ್ರೀತಿಸುತ್ತಾರೋ, ಅದು ಎಲ್ಲಿ ತಪ್ಪಿ ಹೋಗುವುದೋ ಎಂದು ಅವರು ಎಷ್ಟು ಅದನ್ನು ಅಪ್ಪಿಕೊಳ್ಳುವರೋ ಅಷ್ಟು ಬೇಗ ಅದು ಅವರನ್ನು ಬಿಟ್ಟು ಹೋಗುತ್ತದೆ. ಅವರು ಹೆಚ್ಚು ಹೊಂದಿದ ಹಾಗೆ ಇತರರ ಮೇಲೆ ಅವರ ದೃಷ್ಟಿ ಕಡಿಮೆಯಾಗುತ್ತದೆ. ಅವರ ಹತ್ತಿರ ಎಷ್ಟು ಹೆಚ್ಚಾಗಿರುವುದೋ ಅಷ್ಟು ಬಡವರಾಗಿ ಅವರನ್ನು ಅವರು ಭಾವಿಸುತ್ತಾರೆ. ಓ ಐಶ್ವರ್ಯದ ಮೋಸ! ಅವರು ದೇವರ ಕೆಲಸದ ಕುರಿತಾಗಿ ನೋಡುವುದಿಲ್ಲ ಮತ್ತು ಅವರಿಗೆ ಅದು ಕಾಣುವುದಿಲ್ಲ. ಎಲೆನ್ ಜಿ ವೈಟ್ ಅಧ್ಯಾತ್ಮಿಕ ವರಗಳು ಸಂಪುಟ 2, ಪುಟ 267.

ಅಸ್ಪಷ್ಟವಾದ ಅಧ್ಯಾತ್ಮಿಕ ದೃಷ್ಟಿಯು ನಿತ್ಯ ರಕ್ಷಣೆಯನ್ನು ಗಂಡಾಂತರಕ್ಕೆ ತಳ್ಳುತ್ತದೆ.



ಕ್ರಿಸ್ತನನ್ನು ನಮ್ಮ ದೃಷ್ಟಿಯಲ್ಲಿ ಇಟ್ಟು ಕೊಳ್ಳುವುದು ಮಾತ್ರ ಸಾಲುವುದಿಲ್ಲ ಬದಲಿಗೆ ಆತನೇ ನಮ್ಮ ಕೇಂದ್ರಬಿಂದುವಾಗಿರಬೇಕು.

ಮತ್ತಾಯ 13:3–7 ನ್ನು ಓದಿರಿ ಯೇಸುವು ಯಾವ ಎಚ್ಚರಿಕೆಯನ್ನು ನಮಗೆ ಇಲ್ಲಿ ನೀಡುತ್ತಾನೆ ಇದು ಹೇಗೆ ಶ್ರೀಮಂತರಿಗೆ ಹಾಗೂ ಬಡವರಿಗೆ ಸುಲಭವಾಗಿ ಬೀಳಲು ಸರಳವಾದ ಬಲೆಯಾಗುತ್ತದೆ.

ಮೊದಲನೇಯದಾಗಿ ಯೇಸುವು "ಲೋಕದ ಆಸೆಗಳ ಕುರಿತಾಗಿ" ನಮ್ಮನ್ನು ಎಚ್ಚರಿಸುತ್ತಾನೆ. (ಮತ್ತಾಯ 13:22). ನಮಗೆಲ್ಲರಿಗೂ ಅವಶ್ಯಕತೆಗಳು ಇವೆ ಎಂದು ಅದರಲ್ಲೂ ಹಣಕಾಸಿನ ಅವಶ್ಯಕತೆಗಳು ಇವೆ ಎಂದು ಗೊತ್ತು. ಬಡವರು ತಮಗೆ ಸಾಕಷ್ಟು ಇಲ್ಲ ಎಂದು ಚಿಂತಿಸುತ್ತಾರೆ, ಶ್ರೀಮಂತರು ಇನ್ನೂ ಏನು ಹೊಂದಬಹುದು ಎಂದು ಚಿಂತಿಸುತ್ತಾರೆ. ಆದರೆ ನಾವು ಈ ಆಸೆಗಳು ವಾಕ್ಯವನ್ನು ಅಡಗಿಸದಂತೆ ನೋಡಿಕೊಳ್ಳಬೇಕು.

ಎರಡನೆಯದಾಗಿ ಯೇಸುವು "ಐಶ್ವರ್ಯದಿಂದ ಉಂಟಾಗುವ ಮೋಸ"ದ ಕುರಿತಾಗಿ ಎಚ್ಚರಿಸುತ್ತಾನೆ. ಐಶ್ವರ್ಯವು ಪಾಪವಲ್ಲದಿದ್ದರೂ ಕೂಡ ಅದು ನಮ್ಮನ್ನು ನಿತ್ಯತ್ವದ ನಾಶನಕ್ಕೆ ತಳ್ಳುವಂತಹ ಶಕ್ತಿಯನ್ನು ಹೊಂದಿದೆ.

ಐಶ್ವರ್ಯದಿಂದ ಉಂಟಾಗುವ ಮೋಸಗಳು ನಿಮ್ಮ ಸ್ವಂತ ಜೀವನದಲ್ಲಿ ಯಾವ ವಿಧದಲ್ಲಿ ಕಾಣುತ್ತವೆ? ಇಂತಹ ಮೊಸಗಳಿಂದ ತಪ್ಪಿಸಿಕೊಳ್ಳಲು ಯಾವ ರೀತಿಯ ಪ್ರಾಯೋಗಿಕ ವಿಧಾನಗಳನ್ನು ನೀವು ಅನುಸರಿಸಬಹುದು?

**ಪಾಠ 2 ನಾನು ನೋಡಿದೆ, ನನಗೆ ಬೇಕು, ನಾನು ತೆಗೆದುಕೊಳ್ಳುವೆ**

**ಜನವರಿ 6–12**

**ಮಂಗಳವಾರ ಜನವರಿ 9**

## ಅತ್ಯಾಷೆಯ ಮೆಟ್ಟಿಲುಗಳು

ಎಲ್ಲಾ ಪಾಪಗಳ ಹಾಗೆ ಅತೀ ಆಸೆಯೂ ಕೂಡ ಹೃದಯದಲ್ಲಿ ಪ್ರಾರಂಭವಾಗುತ್ತದೆ. ಅದು ನಮ್ಮೊಳಗೇ ಆರಂಭವಾಗಿ ನಮ್ಮ ಹೊರಗೆ ಕೆಲಸ ಮಾಡುತ್ತದೆ. ಏದೆನ್ ತೋಟದಲ್ಲಿ ಇದು ತಾನೇ ನಡೆಯಿತು.

ಆದಿಕಾಂಡ 3:1–6 ನ್ನು ಓದಿರಿ, ಹವ್ವಳನ್ನು ಸೆಳೆಯಲು ಸೈತಾನನು ಏನು ಮಾಡಿದನು? ತನ್ನ ಹಳೆಯ ನಿಯಮಗಳಿಂದ ಆದಿಯಿಂದ ಹಿಡಿದು ಈಗಲೂ ಕೂಡ ನಮ್ಮನ್ನು ಅವನು ಹೇಗೆ ಮೋಸಗೊಳಿಸುತ್ತಿದ್ದಾನೆ?

‘ಆಗ ಸ್ತ್ರಿಯು ಆ ಮರದ ಹಣ್ಣು ತಿನ್ನುವುದಕ್ಕೆ ಉತ್ತಮವಾಗಿಯೂ ನೋಡುವುದಕ್ಕೆ ರಮ್ಯವಾಗಿಯೂಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು ಅದನ್ನು ತೆಗೆದುಕೊಂಡು ತಿಂದಳು. ಸಂಗಡ ಇದ್ದ ಗಂಡನಗೂ ಕೊಡಲು ನಷೇಧಿಸಿದ ಹಣ್ಣನ್ನು ಬಹಳ ಆಕರ್ಷಕವಾಗಿ ಹವ್ವಳಿಗೆ ತೋರಿಸಿ ಅವಳ ಬಳಿಯಿದ್ದದ್ದಕ್ಕಿಂತಲೂ ಹೆಚ್ಚಿನದನ್ನು ಬಯಸುವಂತೆ ಮಾಡಿದನು ಮತ್ತು ಅವಳಿಗೆ ಬೇಡದಿರುವ ವಸ್ತುವನ್ನು ಅವಳಿಗೆ ಅವಶ್ಯಕತೆ ಇರುವ ರೀತಿಯಲ್ಲಿ ತೋರಿಸಿದನು. ಎಷ್ಟು ಬುದ್ದಿಶಾಲಿ! ಅವಳ ಬೀಳುವಿಕೆ ಅತ್ಯಾಷೆಗೆ ಬೀಳುವ ಮೂರು ಹಂತಗಳನ್ನು ನಮಗೆ ಜ್ಞಾಪಕಮಾಡುತ್ತದೆ. ನಾನು ನೋಡಿದೆ, ನನಗೆ ಬೇಕು, ನಾನು ತೆಗೆದುಕೊಳ್ಳುವೆ.

ಅತೀ ಆಸೆ, ಒಂದು ಗಂಭಿರವಾದ ಪಾಪವಾಗಿದೆ. ಅದು ನಮ್ಮ ಶರೀರದ ಆಸೆಯ ಹಿಂದೆ ಅಡಗಿದೆ. ಕೊನೆಗೆ ಅದು ತನ್ನ ಫಲವನ್ನು ನೀಡಿದಾಗ ಅದರ ಪರಿಣಾಮ ಬಹಳ ಕೆಟ್ಟದಾಗಿರುತ್ತದೆ. ಅದು ಸಂಭಂದಗಳನ್ನು ಹಾಳು ಮಾಡುತ್ತದೆ, ನಾವು ಪ್ರಿತಿಸುವವರ ಮೇಲೆ ಗಾಯಗಳನ್ನು ಬಿಟ್ಟು ಹೋಗುತ್ತದೆ, ಮತ್ತು ನಮ್ಮಲ್ಲಿ ಪಾಪಪ್ರಜ್ಞೆಯನ್ನು ಬಿಟ್ಟುಹೋಗುತ್ತದೆ.

ಅತೀ ಅಶೆಯು ಎಲ್ಲಾ ನಿಯಮಗಳನ್ನು ಮುರಿಯುವಂತೆ ಮಾಡುತ್ತದೆ. ಅರಸನಾದ



ಅಹಾಬನು ನಾಬೋತನ ದ್ರಾಕ್ಷೆ ತೋಟವನ್ನು ನೋಡಿದನು, ಅದನ್ನು ಬಯಸಿದನು,ಮತ್ತು ರಾಣಿಯು ನಾಬೋತನನ್ನು ಕೊಲ್ಲುವ ತನಕ ತೆಗೆದುಕೊಂಡು ಹೋಯಿತು. (1 ಅರಸರು 21) ಅಕಾನನು ಬೆಲೆಬಾಳುವ ವಸ್ತ್ರವನ್ನು ಮತ್ತು ಹಣವನ್ನು ನೀಡಿದಾಗ ತಡೆದುಕೊಳ್ಳಲು ಆಗಲಿಲ್ಲ. ಅದ್ದರಿಂದ ಅವನು ಅವುಗಳನ್ನು ತೆಗೆದುಕೊಂಡನು. (ಯೆಹೋಶುವ 7:20–22) ಕೊನೆಯದಾಗಿ, ಅತೀ ಅಸೆಯು ಸ್ವಾರ್ಥದ ಇನ್ನೊಂದು ರೂಪವಾಗಿದೆ.

ಒಂದು ವೇಳೆ ಸ್ವಾರ್ಥವು ಪಾಪದ ಇನ್ನೊಂದು ರೂಪವಾದರೆ, ಅತೀ ಆಸೆಯನ್ನು ಸ್ವಾರ್ಥದ ಮುನ್ನುಡಿ ಎಂದು ಕರೆಯಬಹುದು. ಇದನ್ನು ಅಪೋಸ್ತಲನಾದ ಪೌಲನು ‘ಕಠಿಣ ಕಾಲ’ಗಳನ್ನು ವಿವರಿಸುವಾಗ ತಿಳಿಸುತ್ತಾನೆ. (2 ತಿಮೋಥಿ 3:11) ಕೊನೆಯ ತಿರುಗಿಬೀಳುವಿಕೆಯ ಭಾಗವಾಗಿ ಸ್ವಾರ್ಥದ ಜನರು ಅಭಿವೃದ್ದಿಯಾಗುವುದನ್ನು ನಾವು ನೋಡುವಾಗ ಅತೀ ಆಸೆಯು ಅದರ ಮೊದಲ ಫಲವಾಗಿ ನೋಡಬಹುದು. ‘ಮನುಷ್ಯರು ಸ್ವಾರ್ಥ ಚಿಂತಕರೂ, ಹಣದಾಸೆಯವರೂ’ (2 ತಿಮೋಥಿ 3:2) ಜಾನ್ ಹ್ಯಾರಿಸ್ ಮಾಮೊನ್ (ನ್ಯೂಯಾರ್ಕ್: ಲೇನ್&ಸ್ಕಾಟ್ 1849) ಪುಟ 52.

ನಮ್ಮಲ್ಲಿ ನಾವು ಅತೀ ಆಸೆಯ ಸ್ವಭಾವಗಳನ್ನು ಗುರುತಿಸುವುದು ಎಷ್ಟು ಮುಖ್ಯ ಮತ್ತು ಏಕೆ?

**ಬುಧವಾರ** **ಜನವರಿ 10**

## ದುರಾಶೆ–ನಿಮಗೆ ಅನುಕೂಲವಾದವುಗಳನ್ನು ಹೊಂದುವುದು

ಯೆಶಾಯ 56:11 ನ್ನು ಓದಿರಿ ಇಲ್ಲಿ ಯಾವ ಪಾಪದ ಕುರಿತಾಗಿ ಹೇಳಲಾಗಿದೆ?

ಪಾಪದಲ್ಲಿ ಬಿದ್ದಿರುವ ನಮಗೆ ದುರಾಶೆ ಎಂಬುದು ಉಸಿರಾಟದ ಹಾಗೆ ಸುಲಭವಾಗಿರುತ್ತದೆ. ಮತ್ತು ಅದು ಸ್ವಾಭಾವಿಕವಾಗುತ್ತದೆ. ಆದರೆ, ಮಾನವನ ಸ್ವಭಾವದಲ್ಲಿ ದುರಾಶೆಯನ್ನು ಜಯಿಸಲು ಕ್ರಿಸ್ತನ ಸ್ವಭಾವವನ್ನು ಬಿಟ್ಟು ಬೇರೊಂದನ್ನು ನಾವು ಆಲೋಚಿಸಲು ಸಾಧ್ಯವಾಗುವುದಿಲ್ಲ. ‘ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆಯಲ್ಲಾ:ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ

ಸೇರುವುದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು." (2 ಕೊರಿಂಥ 8:9).

ಚರಿತ್ರೆಯ ಉದ್ದಕ್ಕೂ ದುರಾಶೆಯು ತಂದಿರುವ ನಾಶನವನ್ನು ದೇವರು ಮಾತ್ರ ಬಲ್ಲವನಾಗಿದ್ದಾನೆ. ದುರಾಶೆಯು ಯುದ್ದಗಳನ್ನು ತಂದಿದೆ. ದುರಾಶೆಯು ಜನರನ್ನು ಕ್ರೂರವಾದ ಕೃತ್ಯಗಳನ್ನು ಎಸಗುವಂತೆ ಮಾಡಿದೆ ಇದರಿಂದ ಅವರು ಅವರ ಮೇಲೆ ಮತ್ತು ಅವರ ಕುಟುಂಬಗಳ ಮೇಲೆ ವಿನಾಶವನ್ನು ತಂದುಕೊಂಡಿದ್ದಾರೆ. ದುರಾಶೆಯು ಒಂದು ರೋಗದ ಹಾಗೆ ಅದು ಸ್ವಲ್ಪ ಸ್ವಲ್ಪವಾಗಿ ನಮ್ಮನ್ನು ತಿಂದು ಹಾಕಿ ಕೊನೆಗೆ ತಾನು ಮಾತ್ರ ಉಳಿದುಕೊಳ್ಳುತ್ತದೆ. ದುರಾಶೆಯು ಮದುರವಾಗಿದ್ದು ಎಲ್ಲವನ್ನು ಬಯಸುತ್ತದೆ: ಭಾವೋದ್ರೇಕ, ಅಧಿಕಾರ, ಮತ್ತು ಅಸ್ತಿ ಮತ್ತೆ, ನಾನು ನೋಡಿದೆ, ನನಗೆ ಬೇಕು, ನಾನು ತೆಗೆದುಕೊಳ್ಳುವೆ.

ಮತ್ತಾಯ 26:14–16 ಈ ವಿಷಾದದ ಅನುಭವದ ಮೂಲಕ ದುರಾಶೆಯ ಶಕ್ತಿಯ ಬಗ್ಗೆ ನಾವು ಏನು ಕಲಿಯಬಹುದು.?

__________________________________

ಯೂದನ ಮಾತುಗಳನ್ನು ಗಮನಿಸಿ 'ನಾನು ಆವನನ್ನು ನಿಮಗೆ ಹಿಡುಕೊಟ್ಟರೆ ನನಗೆ ಏನು ಕೊಡುತ್ತಿರಿ?' (ಮತ್ತಾಯ 26:14–16)ದುರಾಶೆಯು ಎಲ್ಲವನ್ನೂ ಹೇಗೆ ದಾಟಿಹೋಗುತ್ತದೆ ಎಂಬುದರ ಕುರಿತಾಗಿ ಮಾತನಾಡಿರಿ.: ಯೂದನ ಚರಿತ್ರೆಯಲ್ಲಿ ಯಾರಿಗೂ ಇಲ್ಲದ ಭಾಗ್ಯವನ್ನು ನೀಡಲಾಯಿತು, ಅವನು ಶರೀರಧಾರಿಯಾದ ಕ್ರಿಸ್ತನೊಂದಿಗೆ ಜೀವಿಸುವ ಅವಕಾಶ ಸಿಕ್ಕಿತು, ಎಲ್ಲಾ ಅದ್ಭುತಗಳಿಗೆ ಪ್ರತ್ಯಕ್ಷ ಸಾಕ್ಷಿಯಾದನು, ಜೀವವುಳ್ಳ ದೇವರ ವಾಕ್ಯವನ್ನು ಕೇಳುವ ಸೌಭಾಗ್ಯ ದೊರೆಯಿತು. ಮತ್ತು ಅದರೂ ಕೂಡ ದುರಾಶೆ ಮತ್ತು ಅತ್ಯಾಷೆಯು ಅವನನ್ನು ಎಲ್ಲಿಗೆ ನಡೆಸಿತು ನೋಡಿರಿ.

ತನ್ನನ್ನು ಹಿಡಿದುಕೊಡುವವನ ಜೊತೆಯಲ್ಲಿ ರಕ್ಷಕನು ಎಷ್ಟು ಮೃದುವಾಗಿ ನಡೆದುಕೊಂಡನು ನೋಡಿರಿ! ಆತನ ಬೋಧನೆಯಲ್ಲಿ, ಯೇಸುವು ದುರಾಶೆಯ ಬುಡಕ್ಕೆ ಕೊಡಲಿ ಪೆಟ್ಟನ್ನು ನೀಡುವ ದಯೆಯ ಕುರಿತಾಗಿ ತಿಳಿಸಿದನು. ದುರಾಶೆಯ ಹೀನಾಯ ಮುಖವನ್ನು ಯೂದನ ಮುಂದೆ ಇಟ್ಟನು, ಅನೇಕ ಬಾರಿ ತನ್ನ ಚಿತ್ರಣವನ್ನು



ಶಿಷ್ಯನು ಊಹಿಸಿಕೊಂಡನು, ಆವನ ಪಾಪವು ಅವನ ಕಣ್ಣ ಮುಂದೆ ಕಾಣಿಸಿತು; ಅದರೂ ಕೂಡ ಅವನು ಪಶ್ಚಾತ್ತಾಪ ಪಡಲಿಲ್ಲ ಮತ್ತು ತನ್ನ ಅನೀತಿಯಿಂದ ದೂರ ಸರಿಯಲಿಲ್ಲ. **ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಎಜಸ್, ಪುಟ 295.**

**ಗುರುವಾರ** **ಜನವರಿ 11**

## ಸ್ವಯಂ ನಿಯಂತ್ರಣ

ಈ ಕೆಳಗಿನ ವಚನಗಳನ್ನು ಓದಿರಿ. ಅವು ಏನು ಹೇಳುತ್ತವೆ ಮತ್ತು ಅವು ಕ್ರೈಸ್ತವರಾದ ನಾವು ಶ್ರೀಮಂತರು ಅಥವಾ ಬಡವರಾಗಿರಲಿ ದುರಾಶೆ,ಅತ್ಯಾಷೆಯ ಮತ್ತು ಹಣದ ಪ್ರೀತಿಯಿಂದ ಮತ್ತು ಭೋಗದ ವಸ್ತುಗಳ ಮೋಹದ ಅಪಾಯಗಳಿಂದ ಹೇಗೆ ತಪ್ಪಿಸಿಕೊಳ್ಳಬಹುದು ಎಂದು ತಿಳಿಸುತ್ತವೆ?

ಅ ಪೋ ಕೃ 24:24–26 ________________________

ಗಲಾತ್ಯ 5:22–25 ________________________

2 ಪೇತ್ರನು 1:5–9 ________________________

ನಾವು ಹೇಗೆ ಬದುಕಬೇಕು ಎಂಬುದರ ಕುರಿತಾಗಿ ಈ ವಚನಗಳು ಅಧ್ಯಾತ್ಮಿಕ ಪಾಠಗಳಿಂದ ತುಂಬಿವೆ. ಆದರೆ ಇದರಲ್ಲಿ ಒಂದು ಸಾಮಾನ್ಯ ವಿಷಯವನ್ನು ಗಮನಿಸಬೇಕಾಗಿದೆ. ಅದು ಸ್ವಯಂ ನಿಯಂತ್ರಣ.ಆದರೆ ದುರಾಶೆ, ಅತ್ಯಾಷೆ ಮತ್ತು ವಸ್ತುಗಳನ್ನು ಹೊಂದಬೇಕೆಂಬ ಬಯಕೆಯ ಮುಂದೆ ಇದು ಬಹಳ ಕಷ್ಟ ಎನಿಸುತ್ತದೆ. ಮೊದಲು ನಮ್ಮ ಆಲೋಚನೆ ನಂತರ ಕ್ರಿಯೆ, ನಾವು ಮಾತನಾಡುತ್ತಿರುವ ವಿಷಯಗಳ ಕುರಿತಾಗಿ ನಾವು ಅವುಗಳ ಅಪಾಯದಲ್ಲಿ ಬೀಳದಂತೆ ನಮ್ಮನ್ನು ನಾವು ಹೇಗೆ ಕಾಪಾಡಿಕೊಳ್ಳಬಹುದು.

ಈ ನಿಯಂತ್ರಣವನ್ನು ನಾವು ಸಾಧಿಸಬೇಕಾದರೆ ನಮ್ಮನ್ನು ನಾವು ದೇವರ ಶಕ್ತಿಯ ಅಧೀನಕ್ಕೆ ಒಳಪಡಿಸಬೇಕಾಗಿದೆ. ವಿಶೇಷವಾಗಿ ಇವುಗಳನ್ನು ನಾವು ತುಂಬಾ ಸಮಯದಿಂದ ಅವುಗಳನ್ನು ಅಭ್ಯಾಸಮಾಡಿಕೊಂಡಿದ್ದಾರೆ ಅಥವಾ ಮೆಚ್ಚಿಕೊಂಡಿದ್ದರೆ. ನಮ್ಮ ಸ್ವಂತ ಶಕ್ತಿಯಿಂದ ಈ ಪಾಪದ ಸ್ವಭಾವವನ್ನು ಸೋಲಿಸಲು ಸಾಧ್ಯವಾಗುವುದಿಲ್ಲ. ಶಕ್ತಿಶಾಲಿಯಾದ ಈ ಪಾಪಗಳಿಂದ ನಾವು ದೂರವಾಗಿರಬೇಕಾದರೆ ನಮ್ಮ ಜೀವನದಲ್ಲಿ ಪರಿಶುದ್ದಾತ್ಮನ

ಅದ್ಭುತವಾದ ಶಕ್ತಿಯು ಕೆಲಸ ಮಾಡಬೇಕಾಗುತ್ತದೆ. ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರೆತು ಬೇರೆ ಯಾವದೂ ನಿಮಗೆ ಸಂಭವಿಸುವುದಿಲ್ಲ. ದೇವರು ನಂಬಿಗಸ್ತನು; ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವುದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ದ ಮಾಡುವನು. (1 ಕೊರಿಂಥ 10:13).

2 ಪೇತ್ರ 1:5–9 ಇಲ್ಲಿ ಪೇತ್ರನು ತೋರಿಸುವ ಮಾರ್ಗ ಯಾವುದು? ಅದರ ಮೆಟ್ಟಿಲುಗಳು ಯಾವುವು, ಮತ್ತು ಅವುಗಳನ್ನು ಅದರಲ್ಲೂ ವಿಶೇಷವಾಗಿ ದುರಾಶೆ ಮತ್ತು ಅತ್ಯಾಷೆಗಳನ್ನು ಜಯಿಸುವ ಸಮಯದಲ್ಲಿ ನಾವು ಹೇಗೆ ಅಭ್ಯಾಸ ಮಾಡಬಹುದು?

**ಶುಕ್ರವಾರ** **ಜನವರಿ 12**

## ಹೆಚ್ಚಿನ ಚಿಂತನೆ :

ಮಾನವನ ಅಂತಿಮವಾದ ಗುರಿಯೆಂದರೆ ಸಂತೋಷ ಮತ್ತು ತೃಪ್ತಿಯಿಂದ ಇರುವುದು. ಆದರೆ ಸ್ವಾರ್ಥ ಭರಿತವಾದ ಭೌತಿಕವಾದದಿಂದ ಇದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಜನರಿಗೆ ತಮ್ಮ ಹೃದಯದಲ್ಲಿ ಈ ಸತ್ಯದ ಅರಿವಿದೆ, ಆದರೂ ಕೂಡ ಅವರು ಅಸ್ತಿಯನ್ನು ಸಂಪಾದಿಸುವ ತವಕದಲ್ಲಿರುವರು. ನಾನು ನೋಡಿದೆ, ನನಗೆ ಬೇಕು, ನಾನು ತೆಗೆದುಕೊಳ್ಳುವೆ. ಇದಕ್ಕಿಂತ ಇನ್ನೂ ಸುಲಭವಾಗಿರುವುದು ಯಾವುದು? ಸೇವೆಂತ್–ಡೇ ಅಡ್ವೆಂಟಿಸ್ಟ್ ರು ಎಲ್ಲರ ಹಾಗೆ ಭೌತಿಕವಾದದ ಬೆಲೆಯನ್ನು ಕಂಡುಕೊಳ್ಳುವ ಓಟದಲ್ಲಿ ಭಾಗಿಯಾಗಿದ್ದಾರೆ. ಅದರೂ ಕೂಡ ಅನೇಕ ವಸ್ತುಗಳನ್ನು ಹೊಂದುವ ಈ ಬಯಕೆ ಸಂತೋಷವನ್ನು, ಸಮಾಧಾನ ಅಥವಾ ಸಂತೃಪ್ತಿ ತರುವುದಿಲ್ಲ. ಬದಲಿಗೆ ಸಮಸ್ಯೆಗಳನ್ನು ತರುವುದು, ಶ್ರೀಮಂತ ಯೌವನಸ್ಥನು ಯೇಸುವಿನ ಬಳಿಯಿಂದ ದುಃಖದಿಂದ ಯಾವ ರೀತಿಯಲ್ಲಿ ಹಿಂತಿರುಗಿ ಹೋದನು, ಯಾಕೆಂದರೆ ಅವನು ಏನನ್ನು ಹೇಳಲು ಬಯಸಿದನೋ ಅದನ್ನು ಕೇಳಲು ಆಗಲಿಲ್ಲ. ಬೆನ್ನಟ್ಟುವ ಬಯಕೆಯಿಂದ ತುಂಬಿರುವ ಭೌತಿಕವಾದವು ಜನರ ಆರೋಗ್ಯವನ್ನು ಹಾಳುಮಾಡುತ್ತದೆ, ಅವರ ಜೀವನವು ಕೆಳಮಟ್ಟದ ಸಂತೋಷದಲ್ಲಿ ಇದ್ದು, ಅದು ಖಿನ್ನತೆಗೆ ಅವರನ್ನು ನಡೆಸುತ್ತದೆ,ಮತ್ತು ಶರೀರದ ತೊಂದರೆಗಳಾದ ತಲೆನೋವು, ಸ್ವಭಾವದ ಏರಿಳಿತಗಳು ಮತ್ತು ಸ್ವಾರ್ಥ ಚಿಂತನೆಗಳ ಮತ್ತು ಅಸಾಂಘಿಕ ಚಟುವಟಿಕೆಗಳ ಕಡೆಗೆ ಅವರನ್ನು ನಡೆಸುತ್ತದೆ. **ಟಿಮ್ ಕಸ್ಸೇರ್, ದಿ ಹೈ ಪ್ರೈಸ್ ಆಫ್ ಮೇಟರಿಲಿಸಂ (ಕೇಂಬ್ರಿಜ್, ಮಾಸ್.: ದಿ ಮಿಟ್ ಪ್ರೆಸ್ 2002) ಪುಟ 22.**



ಭೌತಿಕವಾದದ ಕ್ರೈಸ್ತರು ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಅವರು ಆಸ್ತಿಯ ಬಾವಿಯಿಂದ ಗರ್ವದಿಂದ ಕುಡಿಯುವರು ಆದರೆ ಅವರು ಆತ್ಮೀಯ ರೀತಿಯಲ್ಲಿ ಬಾಯಾರಿದ್ದಾರೆ. ಆದರೆ ಕ್ರಿಸ್ತನು ನೀಡುವ ನೀರಿನಿಂದ ನಮಗೆ ಎಂದಿಗೂ ಬಾಯಾರಿಕೆ ಆಗುವುದಿಲ್ಲ. (ಯೋಹಾನ 4:14)

## ಚರ್ಚಿಸಬೇಕಾದ ಪ್ರಶ್ನೆಗಳು

1. ಸಮೃದ್ಧಿಯ ಸುವಾರ್ತೆಯು ಕುರಿತಾಗಿ ಆಲೋಚಿಸಿರಿ. ಇದನ್ನು ಪ್ರತಿಪಾದಿಸುವವರು ಯಾವ ವಚನಗಳನ್ನು ಉಪಯೋಗಿಸಬಹುದು? ಆದೆ ಸಮಯದಲ್ಲಿ ಈ ಸುಳ್ಳು ಬೋಧನೆಗೆ ವಿರುದ್ದವಾಗಿ ಜೀವಿಸಿರುವ ಯಾವ ವ್ಯಕ್ತಿಗಳನ್ನು ಸತ್ಯವೇದದಲ್ಲಿ ನೀವು ನೋಡಬಹುದು?

2. ತನ್ನ ಮೊದಲ ಮಗುವು ಸ್ವಲ್ಪ ದೊಡ್ಡದಾದ ಮೇಲೆ ಒಬ್ಬ ಮನುಷ್ಯನು ಹೀಗೆ ಹೇಳಿದನು:?ಈ ಮಗುವಿನಿಂದ ನಾನು ಎರಡು ಮುಖ್ಯವಾದ ಸತ್ಯವೇದದ ಪಾಠಗಳನ್ನು ಕಲಿತಿದ್ದೇನೆ. ಮೊದಲನೇಯದಾಗಿ ನಾವು ಪಾಪದಲ್ಲಿ ಹುಟ್ಟಿದ್ದೇವೆ. ಎರಡನೇಯದಾಗಿ ನಾವು ಹುಟ್ಟಿನಂದಲೇ ದುರಾಶೆಯಲ್ಲಿ ಹುಟ್ಟಿದ್ದೇವೆ.? ಮಕ್ಕಳು ಸ್ವಾಭಾವಿಕವಾಗಿ ದುರಾಶೆಯಿಂದ ಹುಟ್ಟಿರುತ್ತಾರೆ ಎಂಬುದನ್ನು ಕಥೆಗಳ ಮೂಲಕ ಯಾರು ವಿವರಿಸುತ್ತಾರೆ? ಇದು ದೈವಿಕ ಕೃಪೆಯ ಅವಶ್ಯಕತೆಯ ಕುರಿತಾಗಿ ಏನು ಹೇಳುತ್ತದೆ?

3. ಒಂದು ವೇಳೆ ನಾವು ಎಲ್ಲಾ ಕಷ್ಟಗಳ ಮೂಲವನ್ನು ಹುಡುಕುತ್ತಿದ್ದರೆ ನಾವು ಜನರಲ್ಲಿರುವ ಮೂರ್ಖತನ, ಅಜ್ಞಾನ, ದುರಾಶೆ ಮತ್ತು ಅಧಿಕಾರದ ಮೋಹಕ್ಕಾಗಿ ಹುಡುಕಬೇಕು ಎಂದು ಒಬ್ಬ ವ್ಯಕ್ತಿ ಬರೆಯುತ್ತಾರೆ. ಜನರನ್ನು ಹೆಚ್ಚಾಗಿ ಹಾಳುಮಾಡುವ ದುರಾಶೆಯ ಕುರಿತಾಗಿ ಏನು ಹೇಳಬಹುದು ಅದು ಅವನನ್ನು

ಅಥವಾ ಅವಳನ್ನು ಹಾಳು ಮಾಡುವುದು ಮಾತ್ರವಲ್ಲದೆ ಅವರ ಸುತ್ತಲೂ ಇರುವವರನ್ನೂ ಕೂಡ ಹಾಳುಮಾಡುತ್ತದೆ 'ದುರಾಶೆಯಲ್ಲಿ ಭಾಗಿಯಾಗಿರುವ ಎಲ್ಲರನ್ನೂ ಹೇಗೆ ಅದು ಸರ್ವನಾಶ ಮಾಡುತ್ತದೆ ಎನ್ನುವುದಕ್ಕೆ ನೀವು ಯಾವ ಉದಾಹರಣೆಗಳನ್ನು ನೀಡುವಿರಿ.'